ಶಿವಮೊಗ್ಗ ಟೈಮ್ಸ್ | ದಿನಾಂಕ :11, ಏಪ್ರಿಲ್ 2019

# ತಪ್ಪುಗಳಿಂದ ಪಾಠ ಕಲಿತು ಮತ್ತೆ ತಪ್ಪು ಮಾಡದಂತೆ ಎಚ್ಚರವಹಿಸುವುದೇ ಜೀವನದ ಕಲೆ: ಡಾ। ಚೈತನ್ಯ



ಶಿವಮೊಗ್ಗ: ವಿದ್ಯಾರ್ಥಿ ಜೀವನದಲ್ಲಿ ಮಾಡಿದ ತಪ್ಪುಗಳಿಂದ ಪಾಠ ಕಲಿತುಕೊಂಡು ಮುಂದಿನ ಜೀವನದಲ್ಲಿ ತಪ್ಪುಗಳನ್ನು ಮಾಡದಂತೆ ಎಚ್ಚರ ವಹಿಸುವುದೇ ಜೀವನದ ಕಲೆ ಎಂಬುದಾಗಿ ಪಿಇಎಸ್ ಐಟಿಎಂ ಕಾಲೇಜಿನ ಪ್ರಾಂಶುಪಾಲ ಡಾ। ಚೈತನ್ಯ ಕುಮಾರ್ ಹೇಳಿದರು.

ಪಿಇಎಸ್ಐ ಎಎಂಎಸ್ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ವಿದ್ಯಾರ್ಥಿಗಳು ಯಾವಾಗಲೂ ತುಂಟತನದಿಂದ ಕೂಡಿದ್ದರೂ ಅದರಿಂದಲೇ ಉತ್ತಮ ಸಾಧನೆ ಮಾಡಬಹುದು ಎಂದರಲ್ಲದೆ, ವಿದ್ಯಾರ್ಥಿ ಜೀವನದಲ್ಲಿ ಸವಾಲುಗಳನ್ನು ಎದುರಿಸಿದಾಗ ಮಾತ್ರವೇ ಆತ್ಮಸ್ಥೈರ್ಯ ವೃದ್ಧಿಸಿಕೊಳ್ಳಲು ಸಾಧ್ಯ ಎಂದರು.

ವಿದ್ಯಾರ್ಥಿಗಳು ಕಾಲೇಜು ಜೀವನದಲ್ಲಿ ಮಾಡಿದ ವಿಶೇಷ ಸಾಧನೆಗಳಿಗೆ ಕಾರಣಕರ್ತರಾದ ಉಪನ್ಯಾಸ ವರ್ಗಕ್ಕೆ ಗುರುದಕ್ಷಿಣೆ ನೀಡುವಂತಹ ಸಂದರ್ಭವೇ ಕಾಲೇಜು ದಿನಾಚರಣೆಯ ಮುಖ್ಯ ಉದ್ದೇಶವಾಗಿದೆ ಎಂದರು.

ಈ ಸಂದರ್ಭದಲ್ಲಿ ಕುವೆಂಪು ವಿವಿ ನಡೆಸಿದ ಶೈಕ್ಷಣಿಕ ಸಾಲಿನ ಪದವಿ ಪರೀಕ್ಷೆಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತಲ್ಲದೆ ಇತರೆ ಸಾಧಕ ವಿದ್ಯಾರ್ಥಿಗಳಿಗೆ ಪಾರಿತೋಷಕಗಳನ್ನು ವಿತರಿಸಲಾಯಿತು. ಭರತನಾಟ್ಯ ಗಿನ್ನಿಸ್ ದಾಖಲೆಯಲ್ಲಿ ಪಾಲುದಾರರಾಗಿ ಪಾಲ್ಗೊಂಡಿದ್ದ ಕಾಲೇಜಿನ ಭಾನು, ಕವನಪ್ರಭು, ರಕ್ಷಿತಾ ಹಾಗೂ ಅಂತರ್‍ರಾಷ್ಟ್ರೀಯ ಭರತನಾಟ್ಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಕು। ರಕ್ಷಿತಾ ಅವರನ್ನು ಸನ್ಮಾನಿಸಲಾಯಿತು.

ಪ್ರಾಂಶುಪಾಲೆ ಡಾ। ಕೆ. ಸಾಯಿಲತಾ ಅಧ್ಯಕ್ಷತೆ ವಹಿಸಿದ್ದರು. ಎಂ.ಕಾಂ. ವಿಭಾಗದ ಎಸ್.ಆರ್. ನಾಗರಾಜ್, ಬಿಬಿಎ-ಬಿ.ಕಾಂ. ವಿಭಾಗದ ಮುಖ್ಯಸ್ಥ ರಾಕೇಶ್, ಬಿಸಿಎ ವಿಭಾಗದ ಡಿ. ರೂಪಾ ಇನ್ನಿತರ ಪ್ರಮುಖರು ಉಪಸ್ಥಿತರಿದ್ದರು.

ಅಂಕಿತಾ ಸ್ವಾಗತಿಸಿದರು, ವೈಶಾಲಿ-ವೀಣಾ ನಿರೂಪಿಸಿದರು. ಜಾಯಲಿನ್ ವಂದಿಸಿದರು.

PES INSTITUTE OF ADVANCED MANAGEMENT STUDIES * SHIVAMOGGA

K. Sailatha

Principal
PES Institute of Advanced Management Studies
NH 206, Sagar Road
SHIVAMOGGA-577 204

**ಶಿವಮೊಗ್ಗ ಟೈಮ್ಸ್**

MANAGEMENT STUDIES★SHIVAMOGGA★PES INSTITUTE OF ADVANCED



ಕುವೆಂಪು ವಿವಿ ನಡೆಸಿದ ಪದವಿ ಪರೀಕ್ಷೆಯಲ್ಲಿ ನಗರದ ಪಿಇಎಸ್ ಐಎಎಂಎಸ್ ಕಾಲೇಜಿನ ವಿದ್ಯಾರ್ಥಿನಿ ಎ.ಆರ್. ಚೈತ್ರ ಬಿಸಿಎ ಪದವಿಯಲ್ಲಿ ಶೇ: 91.83 ಅಂಕ ಗಳಿಸಿ ಪ್ರಥಮ ರ್‍ಯಾಂಕ್‌ಗೆ ಪಾತ್ರರಾಗಿದ್ದಾರೆ. ಈ ಪ್ರತಿಭಾನ್ವಿತೆಗೆ ಪಿಇಎಸ್‌ನ ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ-ಬೋಧಕೇತರ ಸಿಬ್ಬಂದಿ ವರ್ಗದವರು ಅಭಿನಂದಿಸಿದರು.

**ದಿನಾಂಕ : 18 ಫೆಬ್ರವರಿ 2019**

K. Sailatha
Principal
PES Institute of Advanced Management Studies
NH 206, Sagar Road
SHIVAMOGGA-577 204